ಮುಖ್ಯಮಂತ್ರಿಗಳಿಂದ ಹೇಳಿಕೆ

ವಿದ್ಯುತ್ ಖೋತವನ್ನು ಶೇಕಡ 20 ರಿಂದ ಶೇಕಡ 10ಕ್ಕೆ ಇಳಿಸಿರುವುದು.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಭಾರೀ ಜಲ ವಿದ್ಯುತ್ ತಯಾರಿಕಾ ಅಣೆಕಟ್ಟುಗಳಲ್ಲಿ ಈ ಮುಂಗಾರಿನ ನೀರಿನ ಹರಿವು ಉತ್ತಮವಾಗಿದ್ದು, ಆಶಾದಾಯಕವಾಗಿದೆ. ದಿನಾಂಕ 7-8-97ರಂದು ಲಿಂಗನಮಕ್ಕಿ ಜಲಾಶಯಕ್ಕೆ ಸುಮಾರು 98,000 ಕ್ಯೂಸೆಕ್ಸ್ ಮತ್ತು ಸೂಪಾ ಅಣೆಕಟ್ಟಿಗೆ 50,000 ಕ್ಯೂಸೆಕ್ಸ್ ನೀರು ಹರಿದು ಬಂದಿರುತ್ತದೆ. ಕಳೆದ ಎರಡು ವರ್ಷಗಳಿಗೆ ಹೋಲಿಸಿದಲ್ಲಿ ಈಗ ಪರಿಸ್ಥಿತಿಯು ಬಹಳ ಉತ್ತಮವಾಗಿದೆ. 1,000 ಕೆ.ವಿ. ಮತ್ತು ಅದಕ್ಕಿಂತ ಕಡಿಮೆ ಕಾಂಟ್ರಾಕ್ಟ್ ಬೇಡಿಕೆ ಇರುವಂಥ ಹೆಚ್‌ಟಿ ಇನ್‌ಸ್ಟಲೇಷನ್ಸ್‌ಗೆ ವಿದ್ಯುತ್ ಕಡಿತವನ್ನು ಸರ್ಕಾರವು ಹಿಂತೆಗೆದುಕೊಂಡಿದೆ. ಹಾಗಿದ್ದರೂ 1,000 ಕೆ.ವಿ ಎ ಮೇಲ್ಪಟ್ಟು ಕಾಂಟ್ರಾಕ್ಟ್ ಡಿಮ್ಯಾಂಡ್ ಇರುವಂಥ ಹೈ ಟೆನ್‌ಷನ್ ಬಳಕೆದಾರರಿಗೆ ಶೇ. 20 ರಷ್ಟು ಇದ್ದ ವಿದ್ಯುತ್ ಖೋತಾವನ್ನು ಶೇ. 10ಕ್ಕೆ ಇಳಿಸಲಾಗಿದೆ. ಶೇ.10ರಷ್ಟು ಇರುವ ಡಿಮ್ಯಾಂಡ್ ಕಡಿತದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಪರಿಸ್ಥಿತಿಯನ್ನು ಪುನರಾಲೋಕಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ರಾಮಗುಂಡಂನಲ್ಲಿ 500 ಮೆಗಾವ್ಯಾಟ್ ಘಟಕ ಮತ್ತು ರಾಯಚೂರಿನಲ್ಲಿ 210 ಮೆಗಾವ್ಯಾಟ್ ಶಾಖೋತ್ಪನ್ನ ಘಟಕಗಳು ದುರಸ್ತಿಗೆ ಮುಚ್ಚಲ್ಪಟ್ಟಿರುವುದಿಂದ ಹೈ ಟೆನ್‌ಷನ್ ಬಳಕೆದಾರರಿಗೆ ವಿಧಿಸಲಾಗಿರುವ ಸಂಜೆಯ ಪೀಕ್ ಲೋಡ್ ರೆಸ್ಟ್ರಿಕ್ಷನ್ಸ್ ಮುಂದುವರಿಯುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರೇ, ತುಮಕೂರಿನಲ್ಲಿ ಪವರ್‌ಕಟ್ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ವಿದ್ಯುತ್ತಿನ ಅಭಾವ ಇರುವುದರಿಂದ ರೈತನ ಐ.ಪಿ. ಸೆಟ್‌ಗಳಿಗೆ ಮೊದಲಿನಂತೆಯೇ ವಸೂಲು ಮಾಡಲು ಆದೇಶ ಮಾಡಿದ್ದೇನೆ ಎನ್ನುವ ವಾಕ್ಯವನ್ನು ನೀವು ಓದಲಿಲ್ಲ. ತಮ್ಮ ಸ್ಟೇಟ್‌ಮೆಂಟಿನಲ್ಲಿರುವ ಕೊನೆಯ ವಾಕ್ಯವನ್ನು ಓದಲಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ನಿಮ್ಮ ಪಕ್ಷ ಬಂದಾಗ, ನೀವು ಇಲ್ಲಿ ಇದ್ದಾಗ ಹಾಗೆ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರೇ, ತುಮಕೂರು ಜಿಲ್ಲೆಯಲ್ಲಿ ಪವರ್‌ಕಟ್ ತೆಗೆಯುತ್ತಾರೆಯೇ ಎನ್ನುವುದನ್ನು ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ವಿದ್ಯುತ್ ಅಭಾವ ಹೋಗಿದೆ. ಅದನ್ನೂ ಸೇರಿಸಿದರೆ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ ಎಂದು ಹೇಳಿದರೆ, ಇವರು ನಾವು ಮಾಡುವುದಿಲ್ಲ, ನೀವು ಬಂದಾಗ ಮಾಡಿ ಎಂದರೆ ನಾವು ಬಂದಾಗ ಖಂಡಿತ ಮಾಡುತ್ತೇವೆ.

ಅಧ್ಯಕ್ಷರು : ಆಯಿತು, ನೋಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರೇ, ತುಮಕೂರು ಜಿಲ್ಲೆ ಪೂರ್ತಿ ಪವರ್ ಕಟ್‌ನಲ್ಲಿ ಇದೆ. ಸನ್ಮಾನ್ಯ ಮುಖ್ಯಮಂತ್ರಿಗಳೇ, ಅಲ್ಲಿ ರೆಗ್ಯುಲರ್ ಪವರ್ ಕಟ್ ತೆಗೆದೇ ಇಲ್ಲ. ಅದಕ್ಕೆ ಏನು ಮಾಡುತ್ತೀರಿ ?

ಶ್ರೀ ಎಸ್. ಪಿ. ಮುದ್ದುಹನುಮೇಗೌಡ : ಬೇರೆ ಯಾವ ಜಿಲ್ಲೆಯಲ್ಲಿ ಪವರ್ ಕಟ್ ಇಲ್ಲ. ುಮಕೂರು ಜಿಲ್ಲೆಯಲ್ಲಿ ರೆಗ್ಯುಲರ್ ಆಗಿ ಲೋಡ್ ಶೆಡ್ಡಿಂಗ್ ಆಗುತ್ತಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇದು ಬಹಳ ಅನ್ಯಾಯ

ಶ್ರೀ ಎಸ್. ಪಿ. ಮುದ್ದಹಮನುಮೇಗೌಡ : ಬಹಳ ತಾರತಮ್ಯ ಮಾಡುತ್ತಿದ್ದಾರೆ.

ಶ್ರೀ ಶರಣಬಸಪ್ಪ ದರ್ಶನಾಪುರ್ : ಮೊನ್ನೆ ಇದರ ಬಗ್ಗೆ ಮಾತನಾಡಿದ್ದೇವೆ. ಅದರ ಬಗ್ಗೆ ನಾವು ುಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಜಿ.ಎಸ್. ಶಿವನಂಜಪ್ಪ : ಅಲ್ಲಿ ಇವತ್ತಿಗೂ ಜಿಲ್ಲೆ ಪೂರ್ತಿ 8 ರಿಂದ 10 ಗಂಟೆಗಳಷ್ಟು ಪವರ್ ಟ್ ಇದೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಅಲ್ಲ ದಿವಸಕ್ಕೆ ಆರು ಗಂಟೆಯಷ್ಟೇ ಪವರ್ ಕೊಡುತ್ತಾ ಇರುವುದು. ಅಲ್ಲಿ ಸುಮಾರು 14 ಗಂಟೆ ವಿದ್ಯುತ್ ಇರುವುದಿಲ್ಲ.

ಶ್ರೀ ಶರಣಬಸಪ್ಪ ದರ್ಶನಾಪುರ್ : ತುಮಕೂರಿನ ಲೋಡ್ ಶೆಡ್ಡಿಂಗ್ ಬಗ್ಗೆ ಮೊನ್ನೆ ಚರ್ಚೆಯಾಗಿದೆ. ಅಲ್ಲಿ ಆದಷ್ಟು ಬೇಗ ಎಲ್ಲೆಲ್ಲಿ ಅವಶ್ಯಕತೆ ಇದೆ, ಅಲ್ಲಿ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಿ ಅದನ್ನು ಕೊಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಡೀ ಜಿಲ್ಲೆಯಲ್ಲಿ ಪವರ್ ಕಟ್ ಇದೆ. ದಯಮಾಡಿ ಅದನ್ನು ತೆಗೆಸಿ ಹಾಕಬೇಕು. ಅದು ಕಿಬ್ಬನಹಳ್ಳಿಗೆ ಸಂಬಂಧಪಡುವುದಿಲ್ಲ. ಅಂತರಸನಹಳ್ಳಿಯಲ್ಲಿ ಟ್ರಾನ್ಸ್‌ಫಾರ್ಮರ್ ಸುಟ್ಟು ಹೋದರೆ ಕಿಬ್ಬನಹಳ್ಳಿಯಲ್ಲಿ ಏಕೆ ಪವರ್ ಕಟ್ ಇದೆ ಎನ್ನುವುದನ್ನು ಹೇಳಿ.

ಶ್ರೀ ಶರಣಬಸಪ್ಪ ದರ್ಶನಾಪುರ್ : ಬೇರೆ ವ್ಯವಸ್ಥೆ ಮಾಡುವವರೆಗೆ ಸಹಕರಿಸಬೇಕು ಎಂದು ಕೋರುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಕಿಬ್ಬನಹಳ್ಳಿಯಲ್ಲೇ ಬೇರೆ ರಿಸೀವಿಂಗ್ ಸ್ಟೇಷನ್ ಇದೆ. ನಾಲ್ಕು ತಾಲ್ಲೂಕುಗಳಿಗೆ ಅಲ್ಲಿಂದ ಫೀಡ್ ಆಗುತ್ತದೆ. ಅಂತರಸನಹಳ್ಳಿಯಲ್ಲಿ ಒಂದು ರಿಸೀವಿಂಗ್ ಸ್ಟೇಷನ್ ಇದೆ. ಅಂತರಸನಹಳ್ಳಿಯಲ್ಲಿ ಫೇಲ್ ಆದರೆ ಕಿಬ್ಬನಹಳ್ಳಿಯಲ್ಲಿ ಏಕೆ ಇವರು ಪವರ್ ಕಟ್ ಮಾಡುತ್ತಾರೆ ಎನ್ನುವುದನ್ನು ಹೇಳಬೇಕು.

ಅಧ್ಯಕ್ಷರು : ಇದು ಪವರ್ ಕಟ್ ಇಲ್ಲ. ಪವರ್ ಸಪ್ಲೈ ಆಗುತ್ತಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಂಟೆರಪ್‌ಷನ್ ಮಾಡುತ್ತೇವೆ ಎಂದು 9 ರಿಂದ 16 ಗಂಟೆ ಪವರ್ ತೆಗೆಯುತ್ತಾರೆ.

MR. SPEAKER : Improper power supply is a different thing and power cut is a different thing. Power cut is a measure taken by the Government when

there is short supply of power Tumkur power problem is really the problem of improper power supply as a result of which you are not having sufficient power.

SRI J.C. MADHUSWAMY : 16 hours a day, power cut is there.

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ಒಂದು ಆದೇಶ ಕೂಡ ಹೊರಡಿಸಿದ್ದಾರೆ.

MR. SPEAKER : I will advise the Hon'ble Minister of State for power to get all the information and come back ಮಂಜುನಾಥ ಕುನ್ನೂರ್‌ರವರೇ, ನೀವು ಮಾತನಾಡುತ್ತೀರಾ ?ನೀವು ವಿಪ್. ನೀವು ಆನಂತರ ಮಾತನಾಡಬೇಕು. ಮೊದಲು ಮುದ್ದಹನುಮೇಗೌಡರಿಗೆ ಅವಕಾಶ ಕೊಡಬೇಕಲ್ಲವೇ ? ನಾನು ಮೊದಲು ಮಾತನಾಡುತ್ತೇನೆ ಎಂದರೆ ಹೇಗೆ ?

ಶ್ರೀ ಮಂಜುನಾಥ್ ಸಿ ಕುನ್ನೂರ್ : ನಮ್ಮಲ್ಲಿ ಅಂಡರ್ ಸ್ಟ್ಯಾಂಡಿಂಗ್ ಇದೆ.

ಅಧ್ಯಕ್ಷರು : ಅಂಡರ್‌ಸ್ಟ್ಯಾಂಡಿಂಗ್ ಇದೆಯೇ ? ಆಮೇಲೆ ನಿಮ್ಮಲ್ಲಿ ರಿಫ್ಟ್ ಬರಬಾರದು ನೋಡಿ. My duty is to maintian unity in all the parties. O.K. Mr. Muddahanume gowda, please co-operate. He says there is understanding with you.

ವಿತ್ತೀಯ ಕಾರ್ಯಕಲಾಪಗಳು

1997-98ನೇ ಸಾಲಿನ ಶಿಕ್ಷಣ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

+ಶ್ರೀ ಮಂಜುನಾಥ್ ಸಿ ಕುನ್ನೂರ್ (ಶಿಗ್ಗಾಂವ್) : ಸನ್ಮಾನ್ಯ ಅಧ್ಯಕ್ಷರೇ, ವಿದ್ಯಾ ಇಲಾಖೆಯ ಮೇಲೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ಹೃತ್ಪೂರ್ವಕ ವಂದನೆಯನ್ನು ಸಲ್ಲಿಸಿ, ಒಂದರೆಡು ಮಾತುಗಳನ್ನು ಹೇಳಲು ಇಚ್ಛಿಪಡುತ್ತೇನೆ.

(ಈ ಹಂತದಲ್ಲಿ ಉಪಾಧ್ಯಕ್ಷರು(ಶ್ರೀ ಚಂದ್ರಶೇಖರ್ ಸಿ. ಮಾಮನಿ) ರವರು ಪೀಠವನ್ನಲಂಕರಿಸಿದರು)

ವಿದ್ಯಾಇಲಾಖೆಯ ಮೇಲೆ ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಸಚಿವರು ಹಾಗೂ ಉನ್ನತ ಶಿಕ್ಷಣ ಸಚಿವರು ಕೆಲವು ಬೇಡಿಕೆಗಳನ್ನು ಇವತ್ತು ನಮ್ಮ ಮುಂದೆ ಮಂಡನೆ ಮಾಡಿದ್ದಾರೆ. ಅವುಗಳನ್ನು ವಿರೋಧಿಸುತ್ತಾ ಕೆಲವೊಂದು ಮಾತುಗಳನ್ನು ಮಾತನಾಡಬೇಕಾಗಿದೆ. ಪ್ರಾಥಮಿಕ ಶಿಕ್ಷಣ ಸಚಿವರಾದ ಹಿರಿಯರಾದಂಥ ಸನ್ಮಾನ್ಯ ಗೋವಿಂದೇಗೌಡರ ಬಗ್ಗೆ ಬಹಳ ಅಭಿಮಾನದಿಂದ ಹೇಳಬೇಕಾಗುತ್ತದೆ. ಅವರು ಒಬ್ಬ ಹಿರಿಯ ಸಚಿವರು ಮತ್ತು ಉತ್ತಮ ಸಚಿವರು ಎನ್ನತಕ್ಕಂಥ ಒಂದು ಭಾವನೆ ಹಾಗೂ ಅವರು ಒಬ್ಬ ಗಾಂಧೀವಾದಿ ಎನ್ನತಕ್ಕಂಥ ಹೆಸರನ್ನೂ ಕೂಡ ನಾವು ಕೇಳಿದ್ದೇವೆ. ಅಂಥ